# ಪ್ರಾತಃಸ್ಮರಣೀಯ ಸ್ವಾಮಿ ಶಾಂಭವಾನಂದರು

**ತಾರಿಣಿ ಚಿದಾನಂದ**

ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸ್ವಾಮಿ ಶಾಂಭವಾನಂದರದು ಬಹುಮುಖ ವ್ಯಕ್ತಿತ್ವ. '**ಶ್ರೀರಾಮಕೃಷ್ಣ ವಿದ್ಯಾಶಾಲೆ**' ಹಾಗೂ '**ರಾಮಕೃಷ್ಣ ನೈತಿಕ-ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ**' ಅವರು ಜನತೆಗೆ ನೀಡಿದ ಮಹತ್ವಪೂರ್ಣ ಶೈಕ್ಷಣಿಕ ಸಂಸ್ಥೆಗಳು. ಅವರನ್ನು ಹತ್ತಿರದಿಂದ ಬಲ್ಲವರಾಗಿದ್ದ ರಾಷ್ಟ್ರಕವಿ ಕುವೆಂಪು ಅವರ ಸುಪುತ್ರಿ, ಈ ಸ್ಮೃತಿಲೇಖನದಲ್ಲಿ ಕೆಲವು ಅಪೂರ್ವ ಮಾಹಿತಿಗಳೊಂದಿಗೆ ತಮ್ಮ ನೆನಪುಗಳನ್ನು ಹಂಚಿಕೊಂಡಿದ್ದಾರೆ.

ಸ್ವಾಮಿ ಶಾಂಭವಾನಂದರು ಕೊಡಗಿನ ಪೊನ್ನಂಪೇಟೆ ಆಶ್ರಮದಿಂದ ಮೈಸೂರಿನ ಆಶ್ರಮಕ್ಕೆ ಅಧ್ಯಕ್ಷರಾಗಿ ಬಂದಿದ್ದು ೧೯೪೧ರಲ್ಲಿ. ನಮ್ಮ ತಂದೆ ಕುವೆಂಪು ಅವರಿಗೂ ಶ್ರೀರಾಮಕೃಷ್ಣ ಆಶ್ರಮಕ್ಕೂ ಅವಿನಾಭಾವ ಸಂಬಂಧ. ಮೈಸೂರಿನಲ್ಲಿ ಶ್ರೀರಾಮಕೃಷ್ಣ ಆಶ್ರಮ ಪ್ರಾರಂಭ ಮಾಡಿದ್ದು ಸ್ವಾಮಿ ಸಿದ್ಧೇಶ್ವರಾನಂದರು. ಆಗ ಕುವೆಂಪುರವರು ವಿದ್ಯಾರ್ಥಿಯಾಗಿ ಮೈಸೂರಿನಲ್ಲಿದ್ದರು. ಆ ದಿನಗಳಿಂದ ಪ್ರಾರಂಭವಾದ ಕುವೆಂಪು ಅವರ ಆಶ್ರಮದ ಸಂಬಂಧ ಕೊನೆಯವರೆಗೂ ಮುಂದುವರಿದಿತ್ತು. ಕುಟುಂಬದ ಎಲ್ಲರನ್ನೂ ಕಳೆದುಕೊಂಡಿದ್ದ ಕುವೆಂಪು ಅವರಿಗೆ ಅಪ್ಪ, ಅಮ್ಮ, ತಂಗಿಯರ ಪ್ರೀತಿ ವಿಶ್ವಾಸಕೊಟ್ಟು ಅವರ ಎಲ್ಲ ಬೆಳವಣಿಗೆಗೆ ಕಾರಣರಾಗಿದ್ದರು ಸ್ವಾಮಿ ಸಿದ್ಧೇಶ್ವರಾನಂದರು. ಸ್ವಾಮಿ ಸಿದ್ಧೇಶ್ವರಾನಂದರ ಮೂಲಕ ಬಂದೊದಗಿದ ಶ್ರೀರಾಮಕೃಷ್ಣರ ಕೃಪೆ ಸ್ವಾಮೀಜಿ ಅವರು ಬೆಂಗಳೂರು ಆಶ್ರಮಕ್ಕೆ ಅಧ್ಯಕ್ಷರಾಗಿ ನಿರ್ಗಮಿಸಿದ ಮೇಲೆಯೂ, ಸ್ವಾಮಿ ಶಾಂಭವಾನಂದರು ಬಂದಾಗಲೂ ಮುಂದುವರಿಯಿತು. ಸ್ವಾಮಿ ಶಾಂಭವಾನಂದರು ಮೂವತ್ತು ವರ್ಷ ಅಧ್ಯಕ್ಷರಾಗಿ ಮೈಸೂರಿನಲ್ಲಿ ನಾನಾ ಪ್ರಕಾರಗಳಿಂದ ಶ್ರೀರಾಮಕೃಷ್ಣ, ವಿವೇಕಾನಂದರ ಭಾವಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡು ಈ ಆಶ್ರಮಕ್ಕೆ ಭದ್ರಬುನಾದಿ ಹಾಕಿದರು. ಮೈಸೂರಿನ ಆಶ್ರಮಕ್ಕೆ ಅವರ ಕೊಡುಗೆ ಅನನ್ಯವಾದುದು.

ನನಗೆ ಸ್ವಾಮಿ ಶಾಂಭವಾನಂದರ ನೆನಪಾಗುವುದು ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ದಿನಗಳದು. ಅವರು ಆಗಾಗ್ಗೆ ಕುವೆಂಪು ಅವರ ಹತ್ತಿರ ಮಾತಾಡಲು ಬರುತ್ತಿದ್ದರು. ಮನೆಗೆ ಬಂದಾಗ ಎತ್ತರ ನಿಲುವಿನ, ಶಿಸ್ತಿನ ಸಿಪಾಯಿಯಂತೆ ಕಾಣುತ್ತಿದ್ದ ಅವರನ್ನು ಭಯಮಿಶ್ರಿತ ಗೌರವದಿಂದ ನೋಡುತ್ತಿದ್ದೆವು. ದೊಡ್ಡವರಾದಂತೆ ಅವರ ಅಕ್ಕರೆಯ ಮಾತುಗಳು, ವಾತ್ಸಲ್ಯ, ಶಿಸ್ತು ಪರಿಚಯವಾದಂತೆ ಅವರಲ್ಲಿ ಪೂಜ್ಯಭಾವನೆ ಮೂಡಿತ್ತು. ಸ್ವಾಮಿ ಶಾಂಭವಾನಂದರು ಮಾಡಿದ ದೊಡ್ಡ ಕೆಲಸಗಳು — ಒಂದು, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರೀರಾಮಕೃಷ್ಣ ವಿದ್ಯಾಶಾಲೆ ಕಟ್ಟಿಸಿದ್ದು; ಮತ್ತೊಂದು, ಪ್ರಬುದ್ಧ ಮಕ್ಕಳ ಮನೋವಿಕಾಸಕ್ಕಾಗಿ ವೇದಾಂತ ಶಾಲೆಯ (ಶ್ರೀರಾಮಕೃಷ್ಣ ನೈತಿಕ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ) ಯೋಜನೆಯನ್ನು ಕೈಗೊಂಡಿದ್ದು.



ಕುವೆಂಪು ಅವರಿಗೂ ವಿದ್ಯಾಶಾಲೆಗೂ ಒಂದು ರೀತಿಯ ಸಂಬಂಧವಿತ್ತು. ಆಶ್ರಮದ ಪ್ರಾರಂಭದ ದಿನಗಳಲ್ಲಿ ಮೈಸೂರಿಗೆ ಓದಲು ಬಂದಿದ್ದ ಕುವೆಂಪು ಅವರು ಆಶ್ರಮಕ್ಕೆ ಬಂದು, ಹತ್ತು ವರ್ಷಗಳ ಕಾಲ ಆಶ್ರಮದಲ್ಲಿ ಇರುವ ಸೌಭಾಗ್ಯ ಒದಗಿ ಬಂದಿತ್ತು. ಆ ಸಮಯದಲ್ಲಿ ಸ್ವಾಮಿ ಸಿದ್ಧೇಶ್ವರಾನಂದರು ಅಧ್ಯಕ್ಷರಾಗಿದ್ದರು. ಕುವೆಂಪು ಅವರು ಮತ್ತು ಅವರೊಡನೆ ಓದಲು ಮೈಸೂರಿಗೆ ಬಂದಿದ್ದ ಅವರ ಬಂಧು ಮಾನಪ್ಪನವರು ಸ್ವಾಮೀಜಿಯ ಹತ್ತಿರ ಮಲೆನಾಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲ, ಓದಲು ಮೈಸೂರಿಗೆ ಬಂದರೂ ಇಲ್ಲಿ ಇರಲು ಯಾವ ವ್ಯವಸ್ಥೆಯೂ ಇಲ್ಲ, ಅಲ್ಲಿ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ, ಇತ್ಯಾದಿ ಅನೇಕ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಸ್ವತಃ ಓದಲು ಬಂದು ಕಷ್ಟಗಳನ್ನು ಅನುಭವಿಸುತ್ತಿದ್ದ ಕುವೆಂಪು ಅವರನ್ನು ನೋಡಿದ್ದರು ಸ್ವಾಮೀಜಿ. ಮಾನಪ್ಪ, ಕುವೆಂಪು ಅವರು ಆಶ್ರಮದಲ್ಲೇ ಒಂದು ಹಾಸ್ಟೆಲ್ ತೆರೆದರೆ ದೂರದ ಹಳ್ಳಿಯ ಮಕ್ಕಳು ಬಂದು ಓದಲು ಅನುಕೂಲ ಎಂದು ಹೇಳುತ್ತಿದ್ದುದನ್ನು ಗಮನಿಸಿ ಸ್ವಾಮಿ ಸಿದ್ಧೇಶ್ವರಾನಂದರು ೧೯೩೨ನೇ ಇಸವಿಯಲ್ಲಿ

ಗ್ರಾಮೀಣ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ಶ್ರೀರಾಮಕೃಷ್ಣ ಸ್ಟೂಡೆಂಟ್ಸ್ ಹೋಂ' ಎಂಬ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಅದರ ಮೊದಲ ವರ್ಷದ ವಿದ್ಯಾರ್ಥಿಗಳಾಗಿ ಮಲೆನಾಡಿನ ಕುವೆಂಪು ಹತ್ತಿರದ ಬಂಧುಗಳ ಮಕ್ಕಳು ಬಂದು ಹಾಸ್ಟೆಲ್ ಸೇರಿದರು. ಹಾಗೆ ಪ್ರಾರಂಭವಾದ ಹಾಸ್ಟೆಲ್, ಮುಂದೆ ಶಾಂಭವಾನಂದರು ಬಂದ ಮೇಲೆ ಬರಿಯ ಹಾಸ್ಟೆಲ್ ಇದ್ದರೆ ಸಾಲದೆಂದು ವಸತಿ ಶಾಲೆಯಾಗಿ ಪರಿವರ್ತಿತವಾಯಿತು. ಅದಕ್ಕಾಗಿ ಬೇಕಾಗುವ ಜಾಗ, ಕಟ್ಟಡ, ಎಲ್ಲವೂ ಸ್ವಾಮಿ ಶಾಂಭವಾನಂದರಿಂದ ಸ್ಥಾಪಿತಗೊಂಡವು. ಮೊದಲು ವಿದ್ಯಾಶಾಲೆಯಲ್ಲಿ ಮಾಧ್ಯಮಿಕ ಹಾಗೂ ಪ್ರೌಢಶಾಲೆಯನ್ನು ತೆರೆದರು. ಸ್ವಲ್ಪ ಕಾಲದ ಮೇಲೆ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಹೆಚ್ಚು ಕೆಲಸವಾಗುವುದೆಂದು ಹೈಸ್ಕೂಲು ಮತ್ತು ಪಿ.ಯು.ಸಿ ತರಗತಿಗಳನ್ನು ತೆಗೆದರು. ಅದೇ ಕ್ರಮ ಇಂದಿಗೂ ಮುಂದುವರಿಯುತ್ತಿದೆ.

ಸ್ವಾಮಿ ಶಾಂಭವಾನಂದರು ಯಾವ ಕೆಲಸವನ್ನು ಪ್ರಾರಂಭ ಮಾಡುವಾಗಲೂ ಎಲ್ಲರ ಅಭಿಪ್ರಾಯ, ಅನಿಸಿಕೆಗಳನ್ನು ಗಮನಿಸುತ್ತಿದ್ದರು. ತಜ್ಞರೊಡನೆ ಅವರು ತೆಗೆದುಕೊಂಡ ಕಾರ್ಯ ನಿರ್ಣಯದ ಬಗ್ಗೆ ಮಾತನಾಡುತ್ತಿದ್ದರು. ಕುವೆಂಪು ಅವರೊಡನೆಯೂ ಅವರ ಎಲ್ಲ ಕೆಲಸ ಕಾರ್ಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಅದಕ್ಕಾಗಿ ಅನೇಕ ಬಾರಿ ನಮ್ಮ ಮನೆ 'ಉದಯರವಿ'ಗೆ ಭೇಟಿ ಕೊಟ್ಟಿದ್ದಾರೆ. ತಂದೆಯವರು ತಮ್ಮ 'ಸ್ವಾಮಿ ವಿವೇಕಾನಂದ' ಪುಸ್ತಕದ ಬಗ್ಗೆ ಮಾತಾಡಲು ಆಶ್ರಮಕ್ಕೆ ಸ್ವಾಮಿ ಸೋಮನಾಥಾನಂದರ ಬಳಿಗೆ ಹೋಗುತ್ತಿದ್ದರು. ಆ ಸಮಯದಲ್ಲಿಯೂ ಸ್ವಾಮಿ ಶಾಂಭವಾನಂದರು ಸಿಗುವರೇ ಎಂದು ನೋಡಿ ಅವರನ್ನು ಭೇಟಿ ಮಾಡಿ, ಮಾತಾಡಿ ಅವರ ಯೋಗಕ್ಷೇಮ ವಿಚಾರಿಸಿ ಬರುತ್ತಿದ್ದರು. ಕುವೆಂಪು ಅವರು ಆಶ್ರಮದಲ್ಲಿ ಇದ್ದಾಗ ಕಲ್ಕತ್ತಾದ ಬೇಲೂರು ಮಠದಿಂದ ಅನೇಕ ಸ್ವಾಮಿಗಳು, ಬ್ರಹ್ಮಚಾರಿಗಳು ಬಂದು ಮೈಸೂರಿನ ಆಶ್ರಮದಲ್ಲಿ ಐದಾರು ತಿಂಗಳು ಇದ್ದು, ಇಲ್ಲಿ ನಡೆಯುತ್ತಿದ್ದ ವೇದಾಂತ ತರಗತಿಗೆ ಹಾಜರಾಗುತ್ತಿದ್ದರು. ಆಶ್ರಮದಲ್ಲಿ ನಡೆಯುತ್ತಿದ್ದ ಆ ತರಗತಿಗಳಿಗೆ ಅಧ್ಯಾತ್ಮದಲ್ಲಿ ಆಸಕ್ತರಾಗಿದ್ದ ಕುವೆಂಪು ಅವರು ಕೂಡ ಹೋಗುತ್ತಿದ್ದರು.

ಕುವೆಂಪು ಅವರು ಹತ್ತು ವರ್ಷಗಳೇ ಆಶ್ರಮವಾಸಿಗಳಾಗಿದ್ದರು. ಅನಂತರ ಆಶ್ರಮದಿಂದ ಎರಡು ಕಿಲೋಮೀಟರು ದೂರದಲ್ಲಿ ಸೈಟ್ ಕೊಂಡು ಮನೆ ಕಟ್ಟಿ ಗೃಹಸ್ಥರಾದರು. ಆಗಲೂ ಆಶ್ರಮದ ಸಂಪರ್ಕ ಮುಂದುವರಿದಿತ್ತು. ಕುವೆಂಪು ಅವರು ಆಗಾಗ್ಗೆ ತಮ್ಮ ಮನೆಗೆ ಆಶ್ರಮದ ಸ್ವಾಮೀಜಿ ಅವರನ್ನೆಲ್ಲಾ ಊಟಕ್ಕೆ ಕರೆದಾಗ, ಮನೆಯಲ್ಲಿಯೂ ಎರಡು ಮೂರು ಗಂಟೆಗಳು ಅಧ್ಯಾತ್ಮದ ಮೇಲೆ ಮಾತುಕತೆ, ಚರ್ಚೆ ನಡೆಯುತ್ತಿತ್ತು ಎಂದು ನಮ್ಮ ಅಮ್ಮ ಹೇಳುತ್ತಿದ್ದರು. ಸ್ವಾಮಿ ಶಾಂಭವಾನಂದರು ಅಧ್ಯಕ್ಷರಾಗಿ ಮೈಸೂರಿನ ಆಶ್ರಮಕ್ಕೆ ಬಂದ ಮೇಲೆ ಅವರನ್ನೂ ತಂದೆಯವರು ನಮ್ಮ ಮನೆ 'ಉದಯರವಿ'ಗೆ ಊಟಕ್ಕೆ ಕರೆದುಕೊಂಡು ಬಂದಿದ್ದರು. ನಾನು ಆರನೇ ತರಗತಿಯಲ್ಲಿದ್ದಾಗ ಸ್ವಾಮೀಜಿ ನಮ್ಮ ಮನೆ ಊಟಕ್ಕೆ ಬಂದಿದ್ದುದು ನೆನಪಾಗುತ್ತಿದೆ. ಆಗ ತಂದೆಯವರು ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಸ್ವಾಮೀಜಿ ಬಂದಾಗ ನಮ್ಮ ಮನೆಯ ಅಡಿಗೆಮನೆಯು ಹಳ್ಳಿಮನೆಯ ಅಡಿಗೆಮನೆಯಂತೆ ಇತ್ತು. ಸೌದೆ ಒಲೆ ಉಪಯೋಗಿಸುತ್ತಿದ್ದುದರಿಂದ ಹೊಗೆಯಿಂದಾಗಿ ಹೆಂಚುಗಳೆಲ್ಲಾ ಮಸಿಯಾಗಿತ್ತು. ಆಗ ತಾನೆ ಬಳಕೆಗೆ ಬರುತ್ತಿದ್ದ ಸೀಮೆಎಣ್ಣೆ ಒಲೆಯನ್ನು ಬಳಸುತ್ತಿದ್ದೆವು. ಇದ್ದಿಲ ಒಲೆಯೂ ಉಪಯೋಗದಲ್ಲಿತ್ತು. ಇದನ್ನೆಲ್ಲ ಗಮನಿಸಿದ ಸ್ವಾಮೀಜಿ ಅವರು, ''ಏನು ಪುಟ್ಟಪ್ಪನವರೆ ಹೀಗಾಗಿದೆ ನಿಮ್ಮ ಅಡಿಗೆ ಮನೆ? ಹೆಂಗಸರ ಕಣ್ಣು ಏನಾಗಬೇಕು? ಇಂದು ವಿದ್ಯುತ್ ತುಂಬ ಸಿಗುತ್ತದೆ. ಒಳ್ಳೆಯ ವಿದ್ಯುತ್ ಒಲೆಗಳು ಬಂದಿದೆ. ಅದನ್ನೆಲ್ಲ ಅಳವಡಿಸಬಾರದೆ? ನಾವು ಆಶ್ರಮದಲ್ಲಿ ಎಲ್ಲ ಅಳವಡಿಸಿದ್ದೇವೆ. ನಾನು ಕಂಟ್ರಾಕ್ಟರನ್ನು ಕಳುಹಿಸುವೆ. ಇದನ್ನೆಲ್ಲ ಹೇಗೆ ಸರಿಪಡಿಸಬೇಕೆಂದು ಹೇಳುವೆ; ಎಲ್ಲ ಕೆಲಸ ಮಾಡಿಸಿಕೊಳ್ಳಿ'' ಎಂದರು. ಅವರಿಗೆ ಗೊತ್ತಿದ್ದ ಕಂಟ್ರಾಕ್ಟರನ್ನು ಕಳುಹಿಸಿಕೊಟ್ಟರು. ಅವರೇ ಸ್ವತಃ ಬಂದು ಏನೇನು ಮಾಡಬೇಕು ಎಂದು ಸಲಹೆ ಕೊಟ್ಟರು. ಅವರು ಹೇಳಿದಂತೆ ಎಲ್ಲ ಹೆಂಚು ತೆಗೆದು ಸಿಮೆಂಟ್ ಗಿಲಾವ್ ಮಾಡಿದರು. ವಿದ್ಯುತ್ ಒಲೆಗಳನ್ನು ಇಟ್ಟುಕೊಳ್ಳಲು ಸಣ್ಣ ಕಟ್ಟೆ ಕಟ್ಟಲು ವ್ಯವಸ್ಥೆ ಮಾಡಿದರು. ಸ್ವಾಮೀಜಿಯವರಿಂದಾಗಿ ನಮ್ಮ ಅಡಿಗೆಮನೆ, ಊಟದ ಮನೆಗಳು ನವೀಕರಣಗೊಂಡವು. ವಿದ್ಯುತ್ ಒಲೆಗಳನ್ನು ತಯಾರು ಮಾಡುತ್ತಿದ್ದ ಜಾಗವನ್ನು ತಿಳಿಸಿ, ಆ ರೀತಿಯ ವಿದ್ಯುತ್ ಒಲೆಯನ್ನು ಇಟ್ಟುಕೊಳ್ಳಲು ಹೇಳಿದರು ಸ್ವಾಮೀಜಿ. ತಂದೆಯವರು ಸ್ವಾಮೀಜಿ ಹೇಳಿದ ಜಾಗದಿಂದ ಒಲೆ ಮಾಡಿಸಿ ಮನೆಗೂ ತಂದಿಟ್ಟರು. ಒಲೆ ಹೆಚ್ಚು ಶಾಖದ ಕಾಯಲ್ಸ್ ಇದ್ದು ಜಾಸ್ತಿ ಅಡಿಗೆ ಮಾಡಲು, ಒಲೆ ಮೇಲುಭಾಗ ಅಗಲವಾಗಿದ್ದು, ದೊಡ್ಡ ದೊಡ್ಡ ಪಾತ್ರೆಗಳನ್ನು ಇಡಲು ಅನುಕೂಲವಾಯಿತು. ನಮ್ಮ ಅಮ್ಮನಿಗೆ ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಕೃಪೆ ಈ ರೀತಿ ಬಂತು ಎಂದು ತುಂಬಾ ಸಂತಸವಾಯಿತು. ನಮ್ಮ ಅಡಿಗೆಮನೆ ರಿಪೇರಿಯಾಗುವ ಮೊದಲು ಸ್ವಾಮೀಜಿ ಅವರು ಅಪ್ಪ, ಅಮ್ಮನನ್ನು ಆಶ್ರಮಕ್ಕೆ ಬರಲು ಹೇಳಿ, ಆಶ್ರಮದ ಅಡಿಗೆ ಮನೆ ನವೀಕರಣಗೊಂಡು ಅನುಕೂಲವಾಗಿದ್ದುದನ್ನು ತೋರಿಸಿದ್ದರು. ಅಂದಿನ ವಿದ್ಯುತ್ ಒಲೆಗಳು ಸ್ವಲ್ಪ ಹೆಚ್ಚು ಕಡಿಮೆಯಾದರೂ ಶಾಕ್ ಹೊಡೆಯುವ ಸಾಧ್ಯತೆ ಹೆಚ್ಚಾಗಿತ್ತು. ಅದಕ್ಕಾಗಿ ವಿದ್ಯಾರ್ಥಿ ನಿಲಯದ ಕಟ್ಟಡದ ಕೆಲಸ ಮಾಡುತ್ತಿದ್ದ ಬಡಗಿಗಳ ಹತ್ತಿರ ನಮ್ಮ ಅಡಿಗೆಮನೆ, ಒಲೆ ಇಡುವ ಕಟ್ಟೆಯ ಮುಂದಿನ ಜಾಗದ ಅಳತೆಗೆ ಸರಿಯಾಗಿ ಒಳ್ಳೆಯ ಮರದಲ್ಲಿ ದೊಡ್ಡ ಮಣೆ ಮಾಡಿಸಿಕೊಟ್ಟರು. ಅಮ್ಮ ಅದರ ಮೇಲೆ ನಿಂತು ಕೆಲಸ ಮಾಡುವುದು, ಕುಳಿತು ಕೆಲಸ ಮಾಡುವುದು ಮಾಡುತ್ತಿದ್ದರು. ಹೆಚ್ಚು ಕಡಿಮೆಯಾಗಿ ವಿದ್ಯುತ್ ಒಲೆ ಶಾಕ್ ಹೊಡೆದರೂ ಮರದ ಮಣೆ ಮೇಲಿರುವುದರಿಂದ ಏನೂ ತೊಂದರೆಯಾಗುತ್ತಿರಲಿಲ್ಲ. ಕಬ್ಬಿಣದ ಒಲೆ ಹಾಗೂ

ಮರದ ದೊಡ್ಡಮಣೆ ಇನ್ನೂ ಹಾಗೆಯೇ ನಮ್ಮ ಮನೆಯಲ್ಲಿದೆ. ಅವು ಕಣ್ಣಿಗೆ ಬಿದ್ದಾಗಲೆಲ್ಲಾ ಸ್ವಾಮಿ ಶಾಂಭವಾನಂದರು ಕಣ್ಣೆದುರಿಗೆ ಬರುತ್ತಾರೆ.

ಕುವೆಂಪು ಅವರು ನಿವೃತ್ತರಾದ ಮೇಲೆ ಅವರ ದೊಡ್ಡ ಕಾರನ್ನು ಬೇಕಾದ ಅಗತ್ಯ ಕೆಲಸಗಳಿಗೆ ಅವರೇ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಒಮ್ಮೆ ಅವರು ಮತ್ತು ತಾಯಿಯವರು ಸಾಮಾನು ತರಲು ಹೊರಹೋಗಿದ್ದರು. ಹಿಂದಕ್ಕೆ ಬರುವಾಗ ಆಶ್ರಮಕ್ಕೆ ಸಮೀಪದಲ್ಲಿ ಕಾರುನಿಂತು ಹೋಯಿತು, ಏನು ಮಾಡಿದರೂ ಹೊರಡಲಿಲ್ಲ. ಅಪ್ಪ, ಅಮ್ಮ ಆಶ್ರಮಕ್ಕೆ ಹೋಗಿ ಸ್ವಾಮಿ ಶಾಂಭವಾನಂದರನ್ನು ನೋಡಿ ವಿಷಯ ತಿಳಿಸಿದರು. ಸ್ವಾಮೀಜಿ, ''ಆಗಲೇ ಕತ್ತಲಾಗಿದೆ. ಇಷ್ಟು ಹೊತ್ತಿನಲ್ಲಿ ರಿಪೇರಿಗೆ ಜನ ಸಿಗುವುದು ಕಷ್ಟ. ಆಶ್ರಮದ ಕೆಲಸಗಾರರನ್ನು ಕಳುಹಿಸುವೆ. ಎಲ್ಲ ಸೇರಿ ಕಾರು ದಬ್ಬಿ ಆಶ್ರಮದ ಕಾಂಪೌಂಡ್ ಒಳಗೆ ನಿಲ್ಲಿಸಿ. ನಾಳೆ ಬೆಳಿಗ್ಗೆ ರಿಪೇರಿಗೆ ಜನ ಕರೆದುಕೊಂಡು ಬಂದು ಸರಿಮಾಡಿಸಿಕೊಳ್ಳಿ'' ಎಂದರು. (ಆ ಕಾಲದಲ್ಲಿ ಕಾರು ಒಂದು ವಿಶೇಷ ವಾಹನ. ಅದನ್ನು ರಾತ್ರಿ ಯಾರೂ ಹೊರಗಡೆ ಬೀದಿಯಲ್ಲಿ ನಿಲ್ಲಿಸುತ್ತಿರಲಿಲ್ಲ. ಕಾರು ಇರುವವರ ಮನೆಯಲ್ಲಿ ಕಾರು ಸುರಕ್ಷಿತವಾಗಿ ನಿಲ್ಲಿಸಲು ಶೆಡ್ ಕಟ್ಟಿಸಿಕೊಳ್ಳುತ್ತಿದ್ದರು.) ಕುವೆಂಪು ಅವರು ಕಾರನ್ನು ಸ್ವಾಮೀಜಿ ಅವರು ಹೇಳಿದಂತೆ ಆಶ್ರಮದ ಕಾಂಪೌಂಡ್ ಒಳಗೆ ನಿಲ್ಲಿಸಿದರು. ಸ್ವಾಮೀಜಿ ಅವರು ''ಆಶ್ರಮದ ಗೇಟಿಗೆ ರಾತ್ರಿ ಬೀಗ ಹಾಕುತ್ತೇವೆ. ನಿಮ್ಮ ಕಾರು ಸುರಕ್ಷಿತವಾಗಿರುತ್ತದೆ'' ಎಂದು ಹೇಳಿ, ಅಪ್ಪ ಅಮ್ಮನನ್ನು ಆಶ್ರಮದ ಕಾರಿನಲ್ಲಿ ಮನೆಗೆ ಕಳುಹಿಸಿಕೊಟ್ಟರು.

ಸ್ವಾಮಿ ಶಾಂಭವಾನಂದರಿಗೆ ಕುವೆಂಪು ಬಗ್ಗೆ ಬಹಳ ವಿಶ್ವಾಸ, ಕುವೆಂಪು ಅವರಿಗೂ ಆಶ್ರಮದ ಎಲ್ಲ ಸ್ವಾಮೀಜಿ ಅವರ ಬಗ್ಗೆ ಬಹಳ ಗೌರವ, ವಿಶ್ವಾಸ ಇತ್ತು. ಒಮ್ಮೆ ಶ್ರೀರಾಮಕೃಷ್ಣರ ಜಯಂತಿಯಂದು ನಮ್ಮ ತಾಯಿಯವರೊಡನೆ ನಾನು, ನನ್ನ ಅಕ್ಕ ಸಾಯಂಕಾಲದ ಪೂಜೆಗೆ ಬಂದಿದ್ದೆವು. ರಾತ್ರಿ ಎಂಟು ಗಂಟೆಗೆ ಪೂಜೆ ಮುಗಿದು ಭಕ್ತರೆಲ್ಲಾ ಹೋಗುತ್ತಿದ್ದರು. ಅದೇ ಸಮಯಕ್ಕೆ ತಂದೆಯವರು ನಮ್ಮನ್ನು ಕರೆದುಕೊಂಡು ಹೋಗಲು ಕಾರಿನಲ್ಲಿ ಆಶ್ರಮಕ್ಕೆ ಬಂದವರು, ಪೂಜಾಮಂದಿರಕ್ಕೆ ಬಂದು ದೇವರಿಗೆ ನಮಸ್ಕರಿಸಲು ಒಳಗೆ ಹೋದರು. ಅದೇ ಸಮಯದಲ್ಲಿ ಸ್ವಾಮಿ ಶಾಂಭವಾನಂದರು ಪೂಜೆ ಮುಗಿಸಿ ಎದ್ದು ಹೊರಟಿದ್ದರು. ಮಂದಿರದ ಬಾಗಿಲಲ್ಲಿ ತಂದೆಯವರನ್ನು ನೋಡಿ ''ಏನು ಪುಟ್ಟಪ್ಪನವರೆ ಈಗ ಬಂದಿರಾ?'' ಎಂದು ಕೇಳಿದರು. ತಂದೆಯವರು, ''ಹೌದು ಈಗ ಬಂದೆ. ಮನೆಯವರನ್ನು ಕರೆದುಕೊಂಡು ಹೋಗಬೇಕು. ಗುರು ಮಹಾರಾಜರಿಗೆ ನಮಸ್ಕರಿಸಲು ಬಂದೆ'' ಎಂದರು. ಪೂಜೆ ಮುಗಿದದ್ದೇ ಗರ್ಭಗುಡಿ ಬಾಗಿಲು ಮುಚ್ಚಿದ್ದರು. ಸಾಮೀಜಿಯವರು, ''ಓ! ನೋಡಿ, ಈಗ ತಾನೆ ಬಾಗಿಲು ಮುಚ್ಚಿದ್ದಾರೆ. ಈ ದಿನ ಶ್ರೀರಾಮಕೃಷ್ಣರಿಗೆ ಎಷ್ಟು ಚೆನ್ನಾಗಿ ಹೂವಿನ ಅಲಂಕಾರ ಮಾಡಿದ್ದಾರೆ! ಅದನ್ನು ನೀವು ನೋಡಬೇಕು'' ಎನ್ನುತ್ತಾ ತಂದೆಯವರನ್ನು 'ಬನ್ನಿ' ಎಂದು ಗರ್ಭಗುಡಿಯ ಪಕ್ಕದ ಕೋಣೆಯ ಬಾಗಿಲಿನಿಂದ ಒಳಗೆ ಕರೆದೊಯ್ದು, ನೇರ ಗರ್ಭಗುಡಿ ಒಳಗೆ ಶ್ರೀರಾಮಕೃಷ್ಣರ ಎದುರು ನಿಲ್ಲಿಸಿ, ''ನೋಡಿ, ಎಷ್ಟು ಅದ್ಭುತವಾಗಿದೆ ಈ ದಿನ ಹೂವಿನ ಅಲಂಕಾರ!'' ಎಂದು ತೋರಿಸಿದರು. (ಗರ್ಭಗುಡಿಗೆ ಆಶ್ರಮದವರಲ್ಲದೆ ಬೇರಾರಿಗೂ ಪ್ರವೇಶವಿಲ್ಲ.) ತಂದೆಯವರು ತುಂಬ ಸಂತಸದಿಂದ ಎಲ್ಲ ನೋಡಿ ನಮಸ್ಕರಿಸಿ ಕಣ್ಣು, ಮನಸ್ಸು ತುಂಬಿಕೊಂಡು ಹೊರಬಂದರು. ಕೈತುಂಬ ಪ್ರಸಾದಕೊಟ್ಟು ಸ್ವಾಮೀಜಿ ಕಳುಹಿಸಿದರು.

ಸ್ವಾಮಿ ಶಾಂಭವಾನಂದರು ವೇದಾಂತ ಶಾಲೆ ಕಟ್ಟುವಾಗ ಆಶ್ರಮದಲ್ಲಿ ಅವರು ಸಿಗುತ್ತಿದ್ದುದು ಬಹಳ ಕಡಿಮೆ. ಕುವೆಂಪು ಅವರು ಸ್ವಾಮೀಜಿಯವರನ್ನು ಭೇಟಿಯಾಗಲು ಹೋಗುತ್ತಿದ್ದುದು ವೇದಾಂತ ಶಾಲೆ ಕಟ್ಟುವ ಜಾಗಕ್ಕೆ. ಅಲ್ಲಿ ಸ್ವಾಮೀಜಿ ಕಟ್ಟಡ ಕಟ್ಟಿಸುವ ಕೆಲಸವನ್ನು ವೀಕ್ಷಿಸುತ್ತಿದ್ದರು. ಒಮ್ಮೊಮ್ಮೆ ನಾನು, ಅಕ್ಕ, ಅಮ್ಮ ಎಲ್ಲರೂ ತಂದೆಯವರೊಡನೆ ಹೋಗುತ್ತಿದ್ದೆವು. ಒಮ್ಮೆ ನಾವು ಹೋದಾಗ ಸ್ವಾಮೀಜಿ ಕೆಳಗಡೆ ಎಲ್ಲಿಯೂ ಕಾಣಲಿಲ್ಲ. ಅಲ್ಲಿದ್ದವರನ್ನು ವಿಚಾರಿಸಿದಾಗ, ''ಸ್ವಾಮೀಜಿ ಮಹಡಿ ಮೇಲೆ ಇದ್ದಾರೆ, ಹೋಗಿ'' ಎಂದರು. ನಾವೆಲ್ಲಾ ಮೇಲೆ ಹೋದಾಗ ಸ್ವಾಮೀಜಿ ಛತ್ರಿ ಹಿಡಿದು ಬಿಸಿಲಲ್ಲಿ ನಿಂತು ಕೆಲಸ ನೋಡುತ್ತಿದ್ದರು. ಸ್ವಾಮೀಜಿಯವರಿಗೆ ಕೆಲವು ದಿನಗಳಿಂದ ಕಾಲುನೋವು ಪ್ರಾರಂಭವಾಗಿತ್ತು. ಅದೆಲ್ಲಾ ತಿಳಿದಿದ್ದ ಕುವೆಂಪು ಅವರು ''ಎಷ್ಟು ಹೊತ್ತಿನಿಂದ ನಿಂತೇ ಕೆಲಸ ಮಾಡಿಸುತ್ತಿದ್ದೀರಿ? ಕುರ್ಚಿಯಲ್ಲಿ ಕುಳಿತಾದರೂ ಕೆಲಸ ನೋಡಬಹುದಲ್ಲ? ನಿಮ್ಮ ಕಾಲುನೋವಿನ ಕಡೆಗೂ ಸ್ವಲ್ಪ ಗಮನ ಕೊಡಬೇಕು'' ಎಂದರು. ''ಹೌದು ಪುಟ್ಟಪ್ಪನವರೆ, ಕೆಳಗಡೆ ಕುರ್ಚಿಯಲ್ಲಿ ಕುಳಿತು ಕೆಲಸ ವೀಕ್ಷಿಸುತ್ತಿದ್ದೆ. ಡಾಕ್ಟರ್ ಹೇಳಿದ್ದಾರೆ ತುಂಬ ನಿಲ್ಲುವುದು ಓಡಾಡುವುದು ಮಾಡಬೇಡಿ ಎಂದು. ಮೇಲೆ ಬಂದ ಮೇಲೆ ಕುರ್ಚಿ ಅಲ್ಲೇ ಉಳಿದಿದೆ'' ಎಂದು ಅಲ್ಲಿದ್ದ ಕೆಲಸಗಾರರ ಹತ್ತಿರ ಕುರ್ಚಿ ತರಲು ಹೇಳಿದರು. ''ನೀವು ನೆನಪಿಸಿದ್ದು ಒಳ್ಳೆಯದಾಯಿತು'' ಎಂದರು. ಕುವೆಂಪು ಅವರು ''ನೀವು ಕೆಳಗಿನಿಂದಲೆ ಕೆಲಸ ಹೇಳಿ ಮಾಡಿಸಬಹುದಲ್ಲಾ'' ಎಂದಾಗ: ''ನಾವು ಎದುರಿಗೆ ಇದ್ದರೆ ಕೆಲಸ ಬೇಗ ಸಾಗುತ್ತದೆ. ಇಲ್ಲದಿದ್ದರೆ ಕೆಲಸಗಾರರು ಕಾಲಕಳೆದು ಸಮಯ ಹಾಳು ಮಾಡುತ್ತಾರೆ. ಬೇಗ ಕಟ್ಟಡ ಮುಗಿಸಲು ಆಗುವುದಿಲ್ಲ'' ಎಂದಿದ್ದರು. ಚಿಕ್ಕವರಾದ ನಾನು, ಅಕ್ಕ ಬಿಸಿಲಿನಲ್ಲಿ ಆರಾಮವಾಗಿ ನಿಂತಿದ್ದು ನೋಡಿ ''ಓ ನಿಮಗೆಲ್ಲ ಚೆನ್ನಾಗಿ ಕೂದಲು ಇದೆ, ನಿಮ್ಮ ತಲೆಗೆ ಬಿಸಿಲು ತಟ್ಟುತ್ತಿಲ್ಲ. ನನಗೆ ಕೂದಲೇ ಇಲ್ಲವಲ್ಲ ಅದಕ್ಕೆ ಛತ್ರಿ ಹಿಡಿದು ನಿಂತಿದ್ದೇನೆ'' ಎಂದು ನಮ್ಮ ಕಡೆ ತಿರುಗಿ ಹೇಳಿದ್ದರು.

ವಿದ್ಯಾಶಾಲೆ, ವೇದಾಂತ ಶಾಲೆ(ರಿಂಸೆ) ಕಟ್ಟಿಸುವಾಗ ಇಟ್ಟಿಗೆ, ಮರ, ಮರಳು ಇತ್ಯಾದಿ ಸಾಮಗ್ರಿಗಳು ಉತ್ತಮ ಗುಣದಲ್ಲಿ ಸರಿ

ಯಾದ ದರದಲ್ಲಿ ಎಲ್ಲಿ ಸಿಗುವುದು ಎಂದು ಸ್ವಾಮೀಜಿ ವಿಚಾರಿಸಿ, ಅವರೆ ಖುದ್ದಾಗಿ ಹೋಗಿ, ನೋಡಿ ತರಿಸಿಕೊಳ್ಳುವ ವ್ಯವಸ್ಥೆ ಮಾಡುತ್ತಿದ್ದರು. ಈ ಎಲ್ಲ ವಿಚಾರಗಳನ್ನು ಕುವೆಂಪು ಅವರು ಸಿಕ್ಕಾಗ ಹೇಳುತ್ತಿದ್ದರು. ಸ್ವಾಮೀಜಿ ಅವರಿಗೆ ಬೆಂಗಳೂರಿನ ಭಕ್ತರೊಬ್ಬರು ಅವರ ಓಡಾಟಕ್ಕೆಂದು ಒಂದು ಅಂಬಾಸಿಡರ್ ಕಾರನ್ನು ಆಶ್ರಮಕ್ಕೆ ಕೊಟ್ಟಿದ್ದರು. ಸ್ವಾಮೀಜಿ ಅವರು ಅದರಲ್ಲಿಯೇ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಸಾಮಾನು ನೋಡಲು ಓಡಾಡುತ್ತಿದ್ದರು. ಒಮ್ಮೆ ಕುವೆಂಪು ಅವರು ವೇದಾಂತ ಶಾಲೆ ಕಟ್ಟುವಾಗ ಸ್ವಾಮೀಜಿ ಅವರನ್ನು ನೋಡಲು ಹೋಗಿದ್ದರು. ಅಲ್ಲಿ ದೊಡ್ಡ ಗಾತ್ರದ ಒಳ್ಳೆಯ ಮರದ ತುಂಡುಗಳನ್ನು ಕೆಲಸಕ್ಕಾಗಿ ಸಂಗ್ರಹಿಸಿದ್ದರು. ಅವನ್ನು ಎಲ್ಲಿಂದ ತಂದಿರುವುದು ಎಂದು ಸ್ವಾಮೀಜಿಯವರನ್ನು ಕೇಳಿದಾಗ, ''ಅವೆಲ್ಲಾ ಊಟಿಯಿಂದ ಬಂದಿವೆ'' ಎಂದರು. ಆ ಮರವನ್ನು ನೋಡಲು ಊಟಿಗೆ ಹೋದಾಗ ಉಂಟಾಗಿದ್ದ ಕಾರು ಅಫಘಾತವನ್ನು ತಿಳಿಸಿದರು. ''ಕಾರಿನಲ್ಲಿ ಊಟಿಯಿಂದ ಹಿಂದಿರುಗುವಾಗ ತುಂಬಾ ಓಡಿದ ಕಾರಿನ ಮುಂದಿನ ಚಕ್ರಗಳು ಸವೆದಿದ್ದವು. ಇದ್ದಕ್ಕಿದ್ದಂತೆ ಕಾರಿನ ಬ್ರೇಕ್ ವಿಫಲವಾಯಿತು. ಅದು ಇಳಿಯುತ್ತಿದ್ದ ಸಮಯದಲ್ಲಿ, ತೀಕ್ಷ್ಣ ತಿರುಗಣೆಗಳು ಇದ್ದ ಜಾಗದಲ್ಲೇ ಹೀಗಾಗಿದೆ. ಒಂದು ಕಡೆ ಪ್ರಪಾತ, ಇನ್ನೊಂದು ಕಡೆ ಬೆಟ್ಟ. ಡ್ರೈವರ್ ತುಂಬ ಹೆದರಿಬಿಟ್ಟ. ನಾನು ಅವನಿಗೆ ಧೈರ್ಯ ತುಂಬುವ ಪ್ರಯತ್ನ ಮಾಡಿದೆ. ಇಳಿಜಾರು ರಸ್ತೆಯಾಗಿ ಗಳಿಗೆ ಗಳಿಗೆಗೆ ಕಾರಿನ ವೇಗ ಹೆಚ್ಚುತ್ತಿತ್ತು. ಶ್ರೀರಾಮಕೃಷ್ಣರ ಕೃಪೆ. ಡ್ರೈವರ್ ಒಂದು ಕಡೆ ರಸ್ತೆ ಪಕ್ಕ ಸ್ವಲ್ಪ ಉಬ್ಬಿನ ಜಾಗ ಬಂದಾಗ ಬುದ್ಧಿ ಉಪಯೋಗಿಸಿ ಕಾರು ಆ ಕಡೆ ತಿರುಗಿಸಿಬಿಟ್ಟ. ಕಾರು ಉಬ್ಬಿನ ಕಡೆ ನುಗ್ಗಿದಾಗ ದೇವರ ದಯೆ, ಅಡ್ಡವಾಗಿ ದೊಡ್ಡ ಮರ ಬಿದ್ದಿತ್ತು. ಕಾರು ಮರಕ್ಕೆ ದಢಾರನೆ ಹೊಡೆದು ನಿಂತಿತು. ಕಾರು ನುಜ್ಜುಗುಜ್ಜಾಗಿತ್ತು. ನಮ್ಮಿಬ್ಬರಿಗೆ ಸಾಕಷ್ಟು ಮೈಗೆ ಆಘಾತವಾಗಿತ್ತು. ದೇವರದಯೆ – ಮೂಳೆ ಮುರಿತ, ಏಟು, ಗಾಯ ಏನೂ ಆಗಿರಲಿಲ್ಲ. ಪುಣ್ಯಕ್ಕೆ ಎದುರಿನಿಂದ ಯಾವ ವಾಹನವೂ ಬರಲಿಲ್ಲ. ಜಜ್ಜಿದ ಕಾರಿನಿಂದ ಕಷ್ಟದಿಂದ ಇಬ್ಬರೂ ಬಾಗಿಲು ತೆಗೆದು ಹೊರಬಂದೆವು. ಸ್ವಲ್ಪ ಹೊತ್ತು ಸುಧಾರಿಸಿಕೊಂಡೆವು. ಡ್ರೈವರ್ ತುಂಬ ಹೆದರಿ, ಅವನ ಬಟ್ಟೆ ಎಲ್ಲ ಗಲೀಜಾಗಿತ್ತು . ಅವನು ಬಟ್ಟೆ ಬದಲಾಯಿಸಿ ಸುಧಾರಿಸಿಕೊಂಡ. ಅಷ್ಟರಲ್ಲಿ ಮೈಸೂರಿನ ಕಡೆಗೆ ಹೊರಟಿದ್ದ ಬಸ್ಸು ಬಂತು. ಅದನ್ನು ನಿಲ್ಲಿಸಿ ಬಸ್ಸು ಹತ್ತಿ, ಮೈಸೂರಿಗೆ ಬಂದೆವು. ಮಾರನೆ ದಿನ ಜಜ್ಜಿದ ಕಾರನ್ನು ತರುವ ವ್ಯವಸ್ಥೆ ಮಾಡಿದೆ. ಆ ಕಾರು ಕೊಟ್ಟಿದ್ದ ಮಾಲೀಕರಿಗೆ ವಿಷಯ ತಿಳಿಸಿದೆ. ಅವರು ಬೆಂಗಳೂರಿನಿಂದ ಬಂದು, ಹಳೆ ಕಾರು ಹಿಂದಕ್ಕೆ ಪಡೆದು ಮತ್ತೊಂದು ಹೊಸ ಕಾರು ಕೊಟ್ಟರು'' ಎಂದು ಹೇಳಿದರು.

ಕುವೆಂಪು ಅವರು ಸಂಸಾರಿಯಾಗಿ ಒಂಟಿಕೊಪ್ಪಲಿನಲ್ಲಿಯೆ ಮನೆ ಕಟ್ಟಿ ನೆಲೆಯೂರಿದರು. ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಆಗಾಗ್ಗೆ ಬೆಂಗಳೂರಿಗೆ ವರ್ಗವಾಗುತ್ತಿತ್ತು. ಮೂರು ನಾಲ್ಕುಬಾರಿ ಬೆಂಗಳೂರಿಗೆ ಮನೆ ಬದಲಾಯಿಸಿದ್ದಾರೆ. ಅಂತಹ ಸಂದರ್ಭದಲ್ಲಿ ಆಶ್ರಮದ ಸ್ವಾಮಿಗಳ ಹತ್ತಿರವೆ 'ಮನೆ ಬಾಡಿಗೆ ಕೇಳಿದರೆ ಯಾರಿಗಾದರು ಕೊಡಿ' ಎಂದು 'ಉದಯರವಿ' ಮನೆಯ ಬೀಗವನ್ನು ಸ್ವಾಮೀಜಿ ಹತ್ತಿರ ಕೊಡುತ್ತಿದ್ದರು. ಸ್ವಾಮಿ ಶಾಂಭವಾನಂದರ ಹತ್ತಿರವೂ ಒಂದೆರಡು ಬಾರಿ ಮನೆ ಬೀಗ ಕೊಟ್ಟು ಬೆಂಗಳೂರಿಗೆ ಹೋಗಿದ್ದಿದೆ. ಸ್ವಾಮೀಜಿ ಅವರು ಮನೆ ಬಾಡಿಗೆ ಕೊಟ್ಟಾಗ ಅದರ ವಿಚಾರವಾಗಿ ಬರೆದ ಕಾಗದಗಳು ಕುವೆಂಪು ಅವರ ಕಾಗದ ಸಂಗ್ರಹದಲ್ಲಿ ಇದ್ದವು.

ಕುವೆಂಪು ಅವರಿಗೆ ಅರುವತ್ತು ವರ್ಷವಾದಾಗ ಕರ್ನಾಟಕ ಸರ್ಕಾರ 'ರಾಷ್ಟ್ರಕವಿ ಪ್ರಶಸ್ತಿ' ಕೊಟ್ಟಿತು. ರಾಜ್ಯದ ಎಲ್ಲೆಡೆಯಿಂದ ಶುಭಾಶಯದ ಮಹಾಪೂರವೇ ಹರಿದು ಬಂದಿತು. ಇದೆಲ್ಲಕ್ಕಿಂತ ಮಿಗಿಲಾಗಿ ಶ್ರೀರಾಮಕೃಷ್ಣರ ಆಶೀರ್ವಾದ ವಿಶೇಷವಾಗಿತ್ತು. ಆಶ್ರಮದಿಂದ ಒಂದು ರಟ್ಟಿನ ಬಾಕ್ಸ್ ಶಾಂಭವಾನಂದರ ಶುಭಾಶಯಗಳೊಡನೆ ಬಂದಿತು. ಕುತೂಹಲದಿಂದ ತೆರೆದು ನೋಡಿದರೆ, ಅದರ ತುಂಬ ನಾನಾ ತರದ ಕೇಕ್, ಬಿಸ್ಕೆಟ್. ರುಚಿ ನೋಡಿದ ನಾವು ಸ್ವಾಮೀಜಿ ಹತ್ತಿರ ''ಇದನ್ನು ಎಲ್ಲಿ ಮಾಡಿದ್ದು'' ಎಂದು ಕೇಳಲು ತಂದೆಯವರಿಗೆ ಹೇಳಿದೆವು. ನಮ್ಮ ಉತ್ಸಾಹವನ್ನು ನೋಡಿ ತಂದೆಯವರು ಸ್ವಾಮೀಜಿಯವ ರನ್ನು ವಿಚಾರಿಸಿದಾಗ, ''ಎಲ್ಲವೂ ವಿದ್ಯಾಶಾಲೆಯಲ್ಲಿಯೇ ತಯಾರಿಸಿದ್ದು. ಆಶ್ರಮದಲ್ಲೂ ವಿದ್ಯುತ್‌ನಿಂದ ಕೇಕ್, ಬಿಸ್ಕೆಟ್ ಬೇಯಿಸುವ ಒಲೆ ತಂದಿದ್ದೇವೆ'' ಎಂದು ಸ್ವಾಮೀಜಿ ತಿಳಿಸಿ, ''ನೀವೆಲ್ಲಾ ಬಂದು ಅದನ್ನು ನೋಡಿ'' ಎಂದು ಹೇಳಿದರು. ನಾವೆಲ್ಲರೂ ಸ್ವಾಮೀಜಿ ಹೇಳಿದ ದಿನ ವಿದ್ಯಾಶಾಲೆಗೆ ಹೋಗಿ ಅಲ್ಲಿ ಬೇಕರಿ ಪದಾರ್ಥಗಳನ್ನು ಮಾಡುವ ವಿದ್ಯುತ್ ಒಲೆಗಳನ್ನು ನೋಡಿದೆವು. ಸ್ವಾಮಿ ಶಾಂಭವಾನಂದರು ''ವಿದ್ಯಾಶಾಲೆ ಮಕ್ಕಳಿಗೆ ಸ್ವಲ್ಪ ಬದಲಾವಣೆ ಇರಲಿ ಎಂದು ಅವರು ಇಷ್ಟ ಪಡುವ ಕೇಕ್, ಬಿಸ್ಕೆಟ್, ಬ್ರೆಡ್, ರಸ್ಕ್ ಎಲ್ಲವನ್ನೂ ಆಗಾಗ್ಗೆ ಮಾಡುತ್ತೇವೆ. ಪ್ರತಿದಿನ ರಾತ್ರಿ ಗೋಧಿ ಬ್ರೆಡ್ ಇಷ್ಟಪಡುವರಿಗಾಗಿ ಮಾಡುವೆವು'' ಎಂದರು. ಅಲ್ಲಿಂದ ಆಶ್ರಮಕ್ಕೂ ಕರೆದೊಯ್ದು ಅಲ್ಲಿದ್ದ ಸಣ್ಣ ಮಟ್ಟದಲ್ಲಿ ತಯಾರಿಸುವ ಒಲೆಗಳನ್ನು ತೋರಿಸಿದರು. ಅವು ಎಲ್ಲಿ ಸಿಗುವುದು ಎಂದು ಹೇಳಿದರು. ''ನೀವೂ ಬೆಂಗಳೂರಿನ ಅಂಗಡಿಗೆ ಹೋಗಿ ಒಲೆ ಕೊಂಡುಕೊಳ್ಳಿ'' ಎಂದರು. ತಂದೆಯವರು ಅಂಗಡಿಯಿಂದ ಒಲೆ ತಂದರು. ಅಮ್ಮ ಮೊದಲೆಲ್ಲಾ ಕೇಕ್, ಬಿಸ್ಕಟ್ ಎಲ್ಲವನ್ನು ಇದ್ದಿಲ ಒಲೆ ಉಪಯೋಗಿಸಿ ಮಾಡುತ್ತಿದ್ದರು. ಆದರೆ ವಿದ್ಯುತ್ ಒಲೆ ಬಂದ ಮೇಲೆ ಅಮ್ಮನಿಗೆ ಕೇಕ್, ಬಿಸ್ಕೆಟ್ ಬೇಯಿಸುವುದು ಸುಲಭವಾಯಿತು. ಅಮ್ಮನಿಗೆ ಆ ಒಲೆ ತುಂಬ ಉಪಯೋಗವಾಯಿತು. ಸ್ವಾಮೀಜಿ ಅವರಿಂದ ನಾವೆಲ್ಲ ಮಕ್ಕಳೂ ನಾನಾ ಬಗೆಯ ಕೇಕ್, ಬಿಸ್ಕಟ್ ತಿನ್ನುವಂತಾಯಿತು. ಸುಮಾರು ನಲುವತ್ತು ವರ್ಷ ಆ ಒಲೆ ಉಪಯೋಗದಲ್ಲಿತ್ತು .

ವಿದ್ಯಾಶಾಲೆಯಲ್ಲಿ ಯಾವ ರೀತಿಯಲ್ಲಿ ಹೊಸ ಏರ್ಪಾಡು ಮಾಡಿದಾಗಲೂ ಸ್ವಾಮೀಜಿ ಅವರು ಕುವೆಂಪು ಅವರನ್ನು ಕರೆಸಿ ತೋರಿಸುತ್ತಿದ್ದರು. ನಮ್ಮನ್ನೂ ಬಂದು ನೋಡಲು ಹೇಳುತ್ತಿದ್ದರು. ''ಮಕ್ಕಳಿಗೆ ಮಂಚದ ವ್ಯವಸ್ಥೆ ಹೇಗಿದೆ ನೋಡಿ, ಅದರಲ್ಲೇ ಕೆಳಗಡೆ ಪೆಟ್ಟಿಗೆ ತರದ ವ್ಯವಸ್ಥೆ ಇದೆ. ಅದರೊಳಗಡೆ ಮಕ್ಕಳು ಅವರ ಬಟ್ಟೆಗಳನ್ನು ಇಟ್ಟುಕೊಳ್ಳುತ್ತಾರೆ. ಅವರ ಹಲ್ಲು ಉಜ್ಜುವ ಬ್ರಷ್, ಸೋಪು ಟವೆಲ್ ಎಲ್ಲಾ ಇಡಲು ವ್ಯವಸ್ಥೆ ಮಾಡಿದ್ದೇವೆ'' ಎಂದು ನಮಗೆಲ್ಲಾ ತೋರಿಸಿ ವಿವರಿಸಿದ್ದರು. ''ವಿದ್ಯಾಶಾಲೆಯ ಊಟದ ಮನೆಯ ವ್ಯವಸ್ಥೆ, ಮಕ್ಕಳು ಊಟದ ಮನೆಯಲ್ಲೇ ಇಟ್ಟಿರುವ ಸ್ಟಾಂಡ್‌ನಲ್ಲಿ ತಟ್ಟೆ-ಲೋಟ ಇಟ್ಟು ಹೋಗುವ ವ್ಯವಸ್ಥೆ. ಇದರಿಂದ ಅಲ್ಲೇ ಊಟಮಾಡಿ ತಟ್ಟೆ ಶುಚಿಗೊಳಿಸಿ ಇಡುವುದು ಸುಲಭ. ಮಕ್ಕಳು ಬೇಗ ಅವರ ಕೆಲಸ ಮುಗಿಸಲು ಅನುಕೂಲವಾಗುವುದು.''

ಸ್ವಾಮೀಜಿ ಅವರಿಗೆ ತುಂಬು ಕುಟುಂಬದ ಮನೆಗಳಲ್ಲಿ ಊಟ ಬಡಿಸುವ ನಮ್ಮ ಸಮಾಜದ ಕ್ರಮದ ಬಗ್ಗೆ ಅಸಮಾಧಾನವಿತ್ತು. ನಮ್ಮ ಮನೆಗೆ ಊಟಕ್ಕೆ ಬಂದಾಗ ಹೇಳುತ್ತಿದ್ದರು: ''ಎಲ್ಲಾ ಹೆಂಗಸರೇ ಬಡಿಸಬೇಕು! ಎಲ್ಲರಿಗೂ ಊಟ ಬಡಿಸಿದ ಮೇಲೆ ಕೊನೆಯಲ್ಲಿ ಯಜಮಾನಿ ಊಟ ಮಾಡುವುದು. ಇದು ನನಗೆ ಸರಿ ಎನಿಸುವುದಿಲ್ಲ.'' ಸ್ವಾಮೀಜಿ ಕೊಡಗಿನವರಾದ್ದರಿಂದ, ''ನಮ್ಮ ಕೊಡಗಿನ ಕಡೆ ಊಟದ ಎಲ್ಲ ಪದಾರ್ಥಗಳು ಊಟದ ಮೇಜಿನ ಮೇಲೆ ಇಟ್ಟು ಸುತ್ತಲೂ ಕುಳಿತು ಬೇಕಾಗಿದ್ದು ತಾವೇ ಬಡಿಸಿಕೊಂಡು ಊಟ ಮಾಡುವರು. ಆದರೆ ಮೈಸೂರಿನ ಕಡೆ ಅಮ್ಮಂದಿರೇ ಎಲ್ಲ ಬಡಿಸಬೇಕು. ನೆಲದ ಮೇಲೆ ಊಟ ಬಡಿಸುವುದು ಇನ್ನೂ ತ್ರಾಸದಾಯಕ. ಪ್ರತಿಯೊಬ್ಬರ ಹತ್ತಿರವೂ ಬಗ್ಗಿ ಬಗ್ಗಿ ಏಳಬೇಕು. ನೀವೆಲ್ಲಾ ಒಮ್ಮೆ ಬನ್ನಿ, ನಾವು ಮಕ್ಕಳಿಗೆ ಹೇಗೆ ಊಟ ಬಡಿಸುವ ವ್ಯವಸ್ಥೆ ಮಾಡಿದ್ದೇವೆ ನೋಡಬಹುದು'' ಎಂದು ಹೇಳಿದರು. ಒಂದು ದಿನ ಊಟಕ್ಕೆ ಬರಲು ಆಮಂತ್ರಣ ಕೊಟ್ಟರು. ಅಪ್ಪ ಅಮ್ಮನೊಡನೆ ನಾನು, ಅಕ್ಕ ಹೋದೆವು. ನಾವೂ ವಿದ್ಯಾರ್ಥಿಗಳ ಜೊತೆ ಊಟಕ್ಕೆ ಕುಳಿತೆವು. ಎಲ್ಲರಿಗೂ ಊಟ ಬಡಿಸಲು ಹತ್ತು ಜನ ಹುಡುಗರು ಸಿದ್ಧರಾದರು, ಊಟ ಬಡಿಸಲು ಪ್ರಾರಂಭಿಸಿದರು. ಮೊದಲ ಪಂಕ್ತಿಯಲ್ಲಿ ಕುಳಿತ ಸ್ವಲ್ಪ ಜನ ಮಕ್ಕಳು ಊಟ ಮುಗಿಸಿ ಎದ್ದು ಕೈತೊಳೆದು ಬಂದರು. ಊಟ ಬಡಿಸುತ್ತಿದ್ದ ಮಕ್ಕಳು ಖಾಲಿಯಾದ ಜಾಗದಲ್ಲಿ ಕುಳಿತರು. ಊಟ ಮುಗಿಸಿದ ವಿದ್ಯಾರ್ಥಿಗಳು ಊಟ ಬಡಿಸುವುದು ಮುಂದು ವರಿಸಿದರು. ಅಷ್ಟೊಂದು ಜನ ವಿದ್ಯಾರ್ಥಿಗಳ ಊಟ ಸ್ವಲ್ಪ ಸಮಯದಲ್ಲಿ ಮುಗಿದಿತ್ತು. ಸ್ವಾಮೀಜಿ ನಮ್ಮನ್ನು ಬೀಳ್ಕೊಳ್ಳು ವಾಗ ನಮ್ಮ ಅಪ್ಪ, ಅಮ್ಮನಿಗೆ ''ನೀವು ನೋಡಿದಿರಲ್ಲ, ಯಾವ ಕ್ರಮ ಅನುಸರಿಸಿ ಬೇಗ ಊಟ ಬಡಿಸಬಹುದು ಎಂದು. ಅದೇ ರೀತಿ ನೀವು ತುಂಬ ಜನ ಸೇರಿದಾಗ ಊಟ ಬಡಿಸುವ ಕ್ರಮ ಜಾರಿಗೆ ತನ್ನಿ'' ಎಂದರು. ಮನೆಯ ಹೆಂಗಸರ ಶ್ರಮ ಕಡಿಮೆ ಯಾಗುತ್ತದೆ ಎಂದರು. ನಮ್ಮ ಅಮ್ಮನಿಗೆ ಸ್ವಾಮೀಜಿ ಅವರ ಶಿಸ್ತು, ವ್ಯವಸ್ಥೆ ಎಲ್ಲಾತುಂಬಾ ಮೆಚ್ಚುಗೆಯಾಗಿತ್ತು. ಪ್ರತಿ ಯೊಂದು ಸಣ್ಣ ಸಣ್ಣ ವಿಚಾರವನ್ನೂ ಅವರು ಗಮನಿಸುತ್ತಿದ್ದರು. ''ಜೀವನವನ್ನು ಆದಷ್ಟು ಸುಲಭಗೊಳಿಸಿಕೊಂಡು ಬದುಕು ವುದು, ಸ್ವಾಮೀಜಿ ಅವರು ಮಾಡಿಸುವ ಕೆಲಸ ಕಾರ್ಯ ನೋಡಿ ನಾವು ಕಲಿಯಬೇಕು'' ಎಂದು ಮನೆಗೆ ಬಂದ ಮೇಲೆ ನಮಗೆಲ್ಲಾ ಹೇಳುತ್ತಿದ್ದರು.

ಶಾಂಭವಾನಂದರು ವಿದ್ಯಾಶಾಲೆ ಕಟ್ಟಿಸುವಾಗ ಕೆಲಸಗಾರರ ಸಂಸಾರ ಇರಲು ಅವಕಾಶ ಮಾಡಿದ್ದರು. ಅದನ್ನು ಬಹಳ ಅಚ್ಚುಕಟ್ಟಾಗಿ ಎಲ್ಲ ಅನುಕೂಲ ಇರುವಂತೆ ಮಾಡಿದ್ದರು. ಕುವೆಂಪು ಅವರಿಗೆ ಬಂದು ನೋಡಲು ಹೇಳಿದರು. ''ಜೊತೆಗೆ ನಿಮ್ಮ ಮನೆಯವರನ್ನು ಕರೆದುಕೊಂಡು ಬನ್ನಿ, ಅವರೂ ನೋಡಲಿ'' ಎಂದು ಹೇಳಿದ್ದರು. ಅಪ್ಪ, ಅಮ್ಮ ಇಬ್ಬರೂ ಹೋಗಿ ನೋಡಿ ಬಂದರು. ಸ್ವತಃ ಸ್ವಾಮೀಜಿ ಅವರೇ ಎಲ್ಲ ಕಡೆ ಕರೆದುಕೊಂಡು ಹೋಗಿ ತೋರಿಸಿದರು. ಈ ಕೆಲಸಗಾರರಿಗೆ ಶುಚಿತ್ವ, ಸಮಯ ಪ್ರಜ್ಞೆ, ಶಿಸ್ತು ಕಲಿಸಲು ಬಹಳ ಶ್ರಮಪಡಬೇಕಾಯಿತು ಎಂದು ಸ್ವಾಮೀಜಿ ಹೇಳಿದರಂತೆ. ಅಮ್ಮನಿಂದ ನಮಗೆ ಎಲ್ಲ ವಿಚಾರ ತಿಳಿಯುತ್ತಿತ್ತು. ಅಮ್ಮ ಮನೆಗೆ ಬಂದ ಮೇಲೆ, ''ಎಷ್ಟೊಂದು ಶುಚಿತ್ವ ಇತ್ತು. ಸ್ವಾಮೀಜಿ ಕೆಲಸಗಾರರಿಗೆ ಹೇಗೆ ಕಲಿಸಿದರೋ ಏನೋ! ಸ್ವಾಮೀಜಿ ಕಂಡರೆ ಭಯ, ಭಕ್ತಿ ಎಲ್ಲ ಇದೆ ಆ ಜನಗಳಿಗೆ! ದೂರದಿಂದ ಸ್ವಾಮೀಜಿ ಬರುವುದು ನೋಡಿದೊಡನೆ ಮನೆ ಮುಂದೆ ಇಟ್ಟಿದ್ದ ಸಾಮಾನುಗಳನ್ನು ಬೇಗ ಬೇಗ ವ್ಯವಸ್ಥೆ ಮಾಡಿ ಇಡುತ್ತಿದ್ದರು. ಬಹಳ ಶುಚಿಯಾಗಿತ್ತು, ಆ ಕೆಲಸಗಾರರ ಮನೆ ಮತ್ತು ಅದರ ಸುತ್ತಮುತ್ತ ಜಾಗ'' ಎಂದರು. ಸ್ವಾಮೀಜಿ ಅವರ ವ್ಯವಸ್ಥೆಯನ್ನು ಅಪ್ಪ ಅಮ್ಮ ಇಬ್ಬರೂ ತುಂಬಾ ಶ್ಲಾಘಿಸುತ್ತಿದ್ದರು.

ಸ್ವಾಮಿ ಶಾಂಭವಾನಂದ ಅವರ ಶಿಸ್ತು, ಸಮಯ ಪರಿಪಾಲನೆ, ಕೆಲಸಗಳಲ್ಲಿ ಒಪ್ಪ ಓರಣ ಎಲ್ಲವೂ ಅವರ ವಿದ್ಯಾಶಾಲೆ ಮಕ್ಕಳ ಕಾರ್ಯಕ್ರಮಗಳಲ್ಲಿ ಎದ್ದು ಕಾಣುತ್ತಿದ್ದವು. ಮಕ್ಕಳಿಗೆ ಬೇಡದ ಚಟುವಟಿಕೆ ಕಡೆಗೆ ಗಮನ ಹೋಗದಿರಲು, ತಂಟೆ ತಕರಾರು ಆಗದಂತೆ ಬೆಳಿಗ್ಗೆ ಆರು ಗಂಟೆಯಿಂದ ರಾತ್ರಿ ಹತ್ತರ ವರೆಗೆ ಮಕ್ಕಳು ಕಾರ್ಯಪ್ರವೃತ್ತರಾಗುವಂತೆ ವೇಳಾಪಟ್ಟಿ ಮಾಡಿದ್ದರು. ರಾತ್ರಿ ಹತ್ತುಗಂಟೆಗೆ ಎಲ್ಲಾ ದೀಪ ಆರಿಸುತ್ತಿದ್ದುದರಿಂದ ಮಕ್ಕಳು ಮಲಗಲೇಬೇಕಾಗುತ್ತಿತ್ತು. ಸಂಜೆಯ ಹೊತ್ತು ಎಲ್ಲರೂ ಆಟದ ಮೈದಾನದಲ್ಲಿ ಒಳ್ಳೆಯ ಗಾಳಿಯಲ್ಲಿ ಇರಬೇಕಾದದ್ದು ಕಡ್ಡಾಯವಾಗಿತ್ತು. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಒಳ್ಳೆಯ ಗಾಳಿಸೇವನೆ ಅಗತ್ಯ ಎಂಬುದು ಸ್ವಾಮೀಜಿ ಅವರ ಹಾರೈಕೆಯಾಗಿತ್ತು.

*(ಮುಂದಿನ ಸಂಚಿಕೆಗೆ)*